ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಸದಸ್ಯರು ಹೇಳಿದ್ದನ್ನೆಲ್ಲಾ ಮನಸ್ಸಿನಲ್ಲಿಟ್ಟು ಕೊಂಡು ಪರಿಶೀಲನೆ ಮಾಡೋಣ.

ಅಧ್ಯಕ್ಷರು.—ಗೈರು ಹಾಜರಾದ ಸದಸ್ಯರ ಪ್ರಶ್ನೆಗಳನ್ನು ಮುತ್ತೊಪ್ಪೆ ಕರೆಯಲಾಗುತ್ತೇನೆ.

ಆರೋಗ್ಯ ಮಂತ್ರಿ ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಿರಿಯ ಕನ್ನಡ ಶೀಘ್ರಲಿಪಿಗಾರರು.

೮೧೩. ಶ್ರೀ ಶಿವನಂಜಪ್ಪ(ಗುಬ್ಬಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಹಾಲಿ ಇರತಕ್ಕ ಕಿರಿಯ ಕನ್ನಡ ಶೀಘ್ರಲಿಪಿಗಾರರ ಸಂಖ್ಯೆ ಎಷ್ಟು ?

ಆ) ನೇಮಕಾತಿ ಸಂದರ್ಭದಲ್ಲಿ ಪೂರ್ಣ ಪ್ರಮಾಣದ ಕನ್ನಡ ಶೀಘ್ರಲಿಪಿಗಾರರ ಹುದ್ದೆಗೆ ಬೇಕಾದ ವಿದ್ಯಾರ್ಹತೆಗಿಂತಲೂ ಹೆಚ್ಚಿನ ವಿದ್ಯಾರ್ಹತೆ ಇದ್ದರೂ ಇವರಿಗೆ ಬಡ್ತಿ ನೀಡದೆ ನೇಮಕಾತಿ ಸಮಿತಿಯ ಮೂಲಕ ಕನ್ನಡ ಶೀಘ್ರಲಿಪಿಗಾರರನ್ನು ನೇಮಕ ಮಾಡಿಕೊಳ್ಳಲು ಕ್ರಮ ಕೈಗೊಂಡಿರುವುದು ನಿಜವೇ ?

ಇ) ನೇಮಕಾತಿ ಸಮಿತಿಯ ಮೂಲಕ ಅಭ್ಯರ್ಥಿಗಳು ನೇಮಕವಾಗುವುದಕ್ಕೆ ಮುಂಚೆಯೇ ಹಾಲಿ ಇರತಕ್ಕ ಕಿರಿಯ ಕನ್ನಡ ಶೀಘ್ರಲಿಪಿಗಾರರ ಪೈಕಿ ಅರ್ಹತೆಯುಳ್ಳವರಿಗೆ ಭಡ್ತಿ ನೀಡಿ ಅವರ ಶ್ರೇಷ್ಠತೆಗೆ (ಸೀನಿಯಾರಿಟಿ) ಧಕ್ಕೆಬಾರದಂತೆ ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ೪೮

ಆ) ನಿಜ

ಇ) ಅರ್ಹತೆಯುಳ್ಳ ಬೆರಳಚ್ಚುಗಾರರು : ಲಿಖಿತ ಹಾಗೂ ಬೆರಳಚ್ಚುಗಾರ ಮತ್ತು ಕಿರಿಯ ಕನ್ನಡ ಶೀಘ್ರಲಿಪಿಗಾರರಿಗೆ ಭಡ್ತಿ ನೀಡಲಾ ಕ್ರಮ ತೆಗೆದು ಕೊಳ್ಳಲಾಗುತ್ತಿದೆ.

ಶ್ರೀ ಜಿ.ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ, ನನ್ನ ಎರಡನೆಯ ಪ್ರಶ್ನೆಗೆ 'ನಿಜ' ಎಂದು ಹೇಳಿದ್ದಾರೆ. ನನ್ನ ಪ್ರಶ್ನೆ ಇದು ನೇಮಕಾತಿ ಸಂದರ್ಭದಲ್ಲಿ ಪೂರ್ಣ ಪ್ರಮಾಣದ ಕನ್ನಡ ಶೀಘ್ರಲಿಪಿಗಾರರ ಹುದ್ದೆಗೆ ಬೇಕಾದ ವಿದ್ಯಾರ್ಹತೆಗಿಂತಲೂ ಹೆಚ್ಚಿನ ವಿದ್ಯಾರ್ಹತೆ ಇದ್ದರೂ ಕೂಡಾ ಅಂತಹವರಿಗೆ ಬಡ್ತಿ ನೀಡದೆ. ನೇಮಕ ಸಮಿತಿಯ ಮೂಲಕ ಕನ್ನಡ ಶೀಘ್ರಲಿಪಿಗಾರರನ್ನು ನೇಮಕ ಮಾಡಿಕೊಳ್ಳಲು ಕ್ರಮ ಕೈಗೊಂಡಿರುವುದು ನಿಜವೇ ಎಂದು ಕೇಳಿದ್ದಕ್ಕೆ 'ನಿಜ' ಎಂದು ಹೇಳಿದ್ದಾರೆ. ಹಾಗಾದರೆ ಒಂದು ವೇಳೆ ನೇಮಕಾತಿ ಮಾಡಿಕೊಳ್ಳುವಾಗ ಕಿರಿಯ ಶೀಘ್ರಲಿಪಿಗಾರರಿಗೆ ಏನಾದರೂ ಅನ್ಯಾಯ ಆದರೆ ಅದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅಧ್ಯಕ್ಷರೇ, ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ನೇರವಾಗಿ ನೇಮಕ ಮಾಡತಕ್ಕದ್ದು, ೫೦ ಪರ್ಸೆಂಟ್, ಪ್ರಮೋಷನ್ ಕೊಡತಕ್ಕದ್ದು ೫೦ ಪರ್ಸೆಂಟ್ ಇರುತ್ತದೆ. ೧೦೦ಕ್ಕೆ ೫೦ಕ್ಕಿಂತ ಹೆಚ್ಚಿಗೆ ಪ್ರಮೋಷನ್ ಕೊಡುವುದಕ್ಕೆ ಆಗುವುದಿಲ್ಲ. ನೂರಕ್ಕೆ ಐವತ್ತಕ್ಕಿಂತ ಹೆಚ್ಚು ಜನ ಎಲಿಜಿಬಲ್ ಇದ್ದರೂ ಕೂಡ ಪ್ರಮೋಶನ್ ಕೊಡುವುದಕ್ಕೆ ಆಗುವುದಿಲ್ಲ. ನೇರವಾಗಿ ನೇಮಕಾತಿ ಮಾಡಬೇಕು. ೫೦ ಭಾಗ ಮಾತ್ರ ಪ್ರಮೋಷನ್ ಕೊಡುತ್ತೇವೆ ಎಷ್ಟಿದನ್ನು ನೇರವಾಗಿ ನೇಮಕ ಮಾಡುತ್ತೇವೆ.